ಮಡಿವಂತಿಕೆ ಅಥವಾ ನೈತಿಕ ಪೊಲೀಸ್‌ಗಿರಿ ನಡೆಸುವುದನ್ನು ಬಿಡಬೇಕು. ನನ್ನ ದೇವೀರಿ ಚಿತ್ರಕ್ಕೆ ಯು ಸರ್ಟಿಫಿಕೇಟ್ ಬಂತು. ಅದೇ ಕರಿಯ ಕಬ್ಬಿಟ್ಟ ಚಿತ್ರಕ್ಕೆ ಎ ತಗೊಳ್ಳಿ ಅಂತ ವಾದಿಸಿದ್ರು. ಕೆಲವೊಮ್ಮೆ ಮಂಡಳಿಯ ಅಧಿಕಾರಿಗಳು ತರ್ಕಾತೀತವಾಗಿಯೂ ವರ್ತಿಸುತ್ತಾರೆ' ಎನ್ನುತ್ತಾರೆ ಕವಿತಾ ಲಂಕೇಶ್.

ಚಿತ್ರರಂಗದಲ್ಲಿ ನಟಿ, ನಿರ್ಮಾಪಕಿಯಾಗಿ ರಾಜಕೀಯಕ್ಕೆ ಬಂದು ಶಾಸಕಿಯೂ ಆದ ತಾರಾ ಅನೂರಾಧ ಅವರ ಪ್ರಕಾರ, 'ಸೆನ್ಸಾರ್ ಮಂಡಳಿ ಬೇಕು. ಇಲ್ಲವಾದಲ್ಲಿ ತುಂಬಾ ಕಷ್ಟವಾಗುತ್ತದೆ.' ಆದರೆ ಈ ವಾದಕ್ಕೆ ಅವರು ಕೊಡುವ ಕಾರಣಗಳು ಬೇರೆ. 'ನಮ್ಮಲ್ಲಿ ಕಲೆ ಎನ್ನುವುದು ದೈವಿಕವಾದದ್ದು. ನಮ್ಮ ಭಾಷೆ, ಸಂಸ್ಕೃತಿಯನ್ನು ರಕ್ಷಿಸಲು ನಿರ್ಬಂಧಗಳು ಬೇಕೇ ಬೇಕು. ಕಲೆಗೆ ನಮ್ಮ ಜೀವನದಲ್ಲಿ ಮಹತ್ವದ ಪಾತ್ರವಿದೆ. ಆದರೆ ಚಲನಚಿತ್ರ ಪ್ರಮಾಣೀಕರಣ ಮಂಡಳಿಯೂ ಗೈಡ್‌ಲೈನ್ಸ್‌ಗಳನ್ನು ಅಪ್‌ಡೇಟ್ ಮಾಡಬೇಕು' ಎನ್ನುತ್ತಾರೆ ತಾರಾ.



ನಿರ್ದೇಶಕ ಯೋಗರಾಜ್ ಭಟ್ ಸೆನ್ಸಾರ್ ಮಂಡಳಿ ಬೇಕು ಎನ್ನುವವರೇ. 'ಇಲ್ಲಾಂದ್ರೆ ಇನ್ನೂ ರಗಳೆ ಆಗಿಬಿಡುತ್ತದೆ ಸಾರ್. ಬಟ್ಟೆ ಎಷ್ಟು ಕಡಿಮೆಯಾದ್ರೂ ಹಾಕ್ಕೊಳ್ಳಿ; ಆದರೆ ಬಟ್ಟೇನೇ ಬೇಡ ಎಂದರೆ ಹೇಗೆ?' ಎಂದು ಅವರು ಉಪಮಾಲಂಕಾರ ಮುಂದಿಡುತ್ತಾರೆ. 'ಹೆಂಗ್ ಬೇಕಾದ್ರೂ ಸಿನಿಮಾ ಮಾಡ್ತೀವಿ ಎಂದು ಹೇಳೋದು ಖಂಡಿತಾ ಸರಿಯಲ್ಲ. ಹಾಗೆಂದು ಸಿನಿಮಾ ಹೀಗೆಯೇ ಇರಬೇಕು ಎಂದು ಹೇಳುವುದೂ ಸರಿಯಲ್ಲ. ಅಶ್ಲೀಲವಾದದ್ದನ್ನೋ, ಹಿಂಸಾತ್ಮಕವಾದದ್ದನ್ನೋ ನೋಡುವವರು ಎಲ್ಲೋ ಹೋಗಿ ನೋಡಿಕೊಂಡು ಬರುತ್ತಾರೆ. ಆದರೆ ಸಿನಿಮಾ ಅನ್ನುವುದು ಪ್ರಜ್ಞಾಪೂರ್ವಕವಾಗಿ ಯೋಜಿಸಿ ಮಾಡುವಂತಹದ್ದು. ಇಲ್ಲಿ ಸಂಯಮ ಬೇಕು' ಎನ್ನುವುದು ಭಟ್ಟರ ಮಾತು.



'ಟೀವಿ ಗಳಲ್ಲಿ ಹಸಿ ಕ್ರೌರ್ಯ, ಮೂಢ ನಂಬಿಕೆಗಳನ್ನೆಲ್ಲ ತೋರಿಸುತ್ತಾರಲ್ಲ?' ಎಂದು ಪ್ರಶ್ನೆ ಹಾಕಿದರೆ, 'ಅದು ರಿಯಾಲಿಟಿ ವಿಶುವಲ್ಸ್ ಸಾರ್. ನ್ಯೂಸ್‌ನಲ್ಲಿ ನಡೆದದ್ದನ್ನು ತೋರಿಸುತ್ತಾರೆ. ಸಿನಿಮಾದಲ್ಲಿ ಕಾಲ್ಪನಿಕವಾಗಿ ದೃಶ್ಯಗಳನ್ನು ಯೋಜಿಸಿ ತೋರಿಸುತ್ತೇವೆ. ಎರಡಕ್ಕೂ ವ್ಯತ್ಯಾಸವಿದೆ. ಸಿನಿಮಾ ಸಮಾಜಮುಖಿ ಮಾಧ್ಯಮ' ಎನ್ನುವುದು ಅವರ ಉತ್ತರ. ಅಂದ ಹಾಗೆ ಯೋಗರಾಜ ಭಟ್ಟರ ಮೊದಲ ಸಿನಿಮಾ 'ಮಣಿ' ವೇಶ್ಯಾವಾಟಿಕೆಯ ವಿಷಯ ಹೊಂದಿತ್ತು. ಅದಕ್ಕೆ 'ಎ' ಸರ್ಟಿಫಿಕೇಟ್ ಸಿಕ್ಕಿತ್ತು. ಆ ಬಳಿಕ 'ರಂಗ ಎಸ್ಸೆಸೆಲ್ಸಿ' ಸಿನಿಮಾ ಮಾಡಿದಾಗ ಯು/ಎ ಸಿಕ್ಕಿತು. ಆ ಬಳಿಕದ್ದು ಎಲ್ಲವೂ ಯು ಸರ್ಟಿಫಿಕೇಟೇ. 'ಮೊದಲು ವಯಸ್ಕರ ಸಿನಿಮಾದಿಂದ ಶುರು ಮಾಡಿ, ಬಳಿಕ ಮಕ್ಕಳ ಸಿನಿಮಾಕ್ಕೆ ಬಂದವನು ನಾನು' ಎಂದು ನಗೆಯಾಡುತ್ತಾರೆ ಭಟ್ಟರು.

ಒಟ್ಟಾರೆ ಗಾಂಧಿನಗರದಲ್ಲಿ ಒಂದು ಅಭಿಪ್ರಾಯ ಇದೆ– ಜಗಳ ಆಡೋದಕ್ಕಾದರೂ ಮಂಡಳಿ ಇರಬೇಕು! ಸ್ವಯಂ ನಿರ್ಬಂಧಗಳನ್ನು ಹಾಕಿಕೊಳ್ಳಲು ಚಿತ್ರರಂಗಕ್ಕೇ ಬಿಟ್ಟರೆ ಆ ಮೆಕಾನಿಸಂ ಇಲ್ಲಿ ಕೆಲಸ ಮಾಡುವುದಿಲ್ಲ ಎನ್ನುವುದೂ ಗಾಂಧಿನಗರದ ಅಭಿಪ್ರಾಯ. ■

